**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 62/2020**

ಚಾಸಾ-2 ಫ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 04-07-2025

| | | |
|---|---|---|
| ಹೆಸರು | : | ಬೀರಣ್ಣ |
| ತಂದೆಯ ಹೆಸರು | : | ಮಾಳಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಅತ್ತನೂರು |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 1 ಮತ್ತು 3 ರವರ ಪರಿಚಯ ಇರುತ್ತದೆ.

ಸಾಕ್ಷಿಗೆ ಗುನ್ನೆ ಸ್ಥಳ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**3** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಬಿ) ಎಂದು ಗುರುತಿಸಲಾಯಿತು.

ನಮ್ಮೂರಿನ ಸಂಗೊಳ್ಳಿ ರಾಯಣ್ಣ ಮೂರ್ತಿ ಹತ್ತಿರ ಈ ರೀತಿ ಘಟನೆ ಆಗಿದೆ ಬಾ ಎಂದು ಫೋನ ಮಾಡಿ ಕರೆದಿದ್ದಕಾಗಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ಏನು ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ 17-08-2019 ರಂದು ಗುನ್ಹೆ ಸ್ಥಳದಲ್ಲಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಗುನ್ಹೆ ಸ್ಥಳದ ಪಂಚನಾಮೆ ಕಾಲಕ್ಕೆ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಅವಮಾನ ಮಾಡಲು ಹಾಕಿದ ಎರಡು ಚಪ್ಪಲಿ ಮತ್ತು ಎರಡು ಶಾಲಾ ಮಕ್ಕಳ ಬೂಟುಗಳನ್ನು ನನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಎರಡು ಚಪ್ಪಲಿಗಳು ಮತ್ತು ಎರಡು ಶಾಲಾ ಮಕ್ಕಳ ಧರಿಸುವ ಎರಡು ಬೂಟುಗಳನ್ನು ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ರಿಂದ 4 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-

ನಾನು ಪೊೀಲಿಸ ಠಾಣೆಯಲ್ಲಿ ಯಾವ ದಿನ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನಗೆ ಗುನ್ಹೆ ಸ್ಥಳ ಪಂಚನಾಮೆ ಹೇಳಲು ಬರುವುದಿಲ್ಲ. ಮು.ಮಾ. 1 ರಿಂದ 4 ಚಪ್ಪಲಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯೂ ಮು.ಮಾ. 1 ರಿಂದ 4 ಗಳನ್ನು ನನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಯಾವುದೇ ಜಪ್ತಿ ಪಂಚನಾಮೆಗೆ ಹೋಗಿಲ್ಲ , ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ಪೋಲಿಸರ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ